## ಗಂಧರ್ವಸೇನ

ಮೌಲ್ಯ :– ಪ್ರತ್ಯಕ್ಷವಾಗಿ ಕಂಡರು ಪ್ರಮಾಣಿಸಿ ನೋಡು.

### ಪದಗಳ ಅರ್ಥ

1. ಒಡ್ಡೋಲಗ – ರಾಜಸಭೆ
2. ರೋದನ – ಅಳುವಿಕೆ
3. ಚುಂಬನ – ಮುತ್ತು
4. ಉದ್ಗರಿಸು – ಹೇಳು
5. ಪರಿಸಮಾಪ್ತಿ – ಮುಕ್ತಾಯ
6. ಶೋಕ – ದುಃಖ
7. ಗದ್ಗದ ಕಂಠ – ನಿಂತು ನಿಂತು ಬರುವ ಅಸ್ಪಷ್ಟವಾದ ಮಾತು.
8. ಅಂತಃಪುರ – ರಾಣಿವಾಸ
9. ತೀರಿಕೊಳ್ಳು – ಮರಣ ಹೊಂದು
10. ಪತ್ತೆ – ಗುರುತು
11. ಬೊಬ್ಬಿಡು – ಕೂಗು
12. ನಿಜಾಂಶ – ಸತ್ಯ
13. ಪಕ್ಕೆಲುಬು – ಇಬ್ಬದಿಯ ಎಲುಬುಗಳು

---

### ಅಭ್ಯಾಸಗಳು

ಅ. ಸರಿಯಾದ ಪದಗಳನ್ನು ಆಯ್ಕೆ ಮಾಡಿ ಬಿಟ್ಟ ಸ್ಥಳ ತುಂಬಿರಿ.

1. ರಾಜನು ಒಡ್ಡೋಲಗ ವನ್ನು ಅಲ್ಲಿಗೆ ಪರಿಸಮಾಪ್ತಿಗೊಳಿಸಿದ.

   (ಒಡ್ಡೋಲಗ, ಬಡ್ಡೋಲಗ, ಓಡ್ಡೋಲಗ)

2. ಸೇವಕಿ ಚುರುಕು ಬುದ್ಧಿಯವಳು

   ( ಮುರುಕು, ತಳುಕು, ಚುರುಕು )

3. ಮಂತ್ರಿ ಅರಮನೆಗೆ ಬಂದು ರಾಜನ ಕಾಲಿಗೆ ಬಿದ್ದು ನಿಜಾಂಶ ಹೇಳಿದ.

   (ನಿಜಾಂಶ, ಸತ್ಯಾಂಶ, ಮಿಥ್ಯಾಂಶ)

4. ರಾಜನಿಗೆ ಗಂಧರ್ವಸೇನ ತೀರಿದ ವಿಷಯ ತಿಳಿಸಿದ್ದು ಮಂತ್ರಿ.

   ( ಮಂತ್ರಿ, ರಾಣಿ, ಸೇವಕಿ )

5. ಅಂತಃಪುರ ಇದರ ಅರ್ಥ ರಾಣಿವಾಸ

   (ರಾಣಿವಾಸ, ಸೇವಕಿಯರ ವಾಸ, ರಾಜಗೃಹ)

ಆ. ಈ ಪದಗಳ ಅರ್ಥ ಬರೆಯಿರಿ.

1. ನಿಟ್ಟುಸಿರು – ದೀರ್ಘವಾಗಿ ಬಿಡುವ ಉಸಿರು.

2. ಪರಿಸಮಾಪ್ತಿ – ಮುಕ್ತಾಯ

3. ಮಾರ್ನುಡಿ – ಪ್ರತಿಯಾಗಿ ಮಾತನಾಡು

4. ಉದ್ಗರಿಸು – ಹೇಳು

ಇ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

1. ಮಂತ್ರಿ ಅಳುತ್ತಾ ರಾಜನ ಬಳಿ ಏನೆಂದು ಹೇಳಿದ ?

ಉ : ಮಂತ್ರಿ ಅಳುತ್ತಾ ರಾಜನ ಬಳಿ ಬಂದು ಗಂಧರ್ವಸೇನರು ತೀರಿಕೊಂಡರು ಎಂದು ಹೇಳಿದ.

2. ಗಂಧರ್ವಸೇನ ಯಾರು ?

ಉ : ಗಂಧರ್ವಸೇನ ಮಡಿವಾಳ್ತಿಯ ಪ್ರೀತಿಯ ಕತ್ತೆ

3. ಗಂಧರ್ವಸೇನ ತೀರಿಕೊಂಡ ವಿಷಯವನ್ನು ರಾಜ ಯಾರಿಗೆ ಹೇಳಿದ ?

ಉ : ಗಂಧರ್ವಸೇನ ತೀರಿಕೊಂಡ ವಿಷಯವನ್ನು ರಾಜ ರಾಣಿಯರಿಗೆ ಹೇಳಿದ

4. ರಾಣಿಯ ಸೇವಕಿ ಏನೆಂದು ಆಲೋಚನೆ ಮಾಡಿದಳು ?

ಉ : ರಾಣಿಯ ಸೇವಕಿ ನಮ್ಮ ಮಹಾರಾಜರಿಗೂ ಆ ಗಂಧರ್ವಸೇನರಿಗೂ ಏನು ಸಂಬಂಧ ಎಂದು ಆಲೋಚನೆ ಮಾಡಿದಳು.

5. ರಾಣಿಯರು ನಗಲು ಕಾರಣವೇನು ?

ಉ : ರಾಜ ಮತ್ತು ಅವನ ಆಸ್ಥಾನಿಕರ ಮೂರ್ಖತನವೆ ರಾಣಿಯರು ನಗಲು ಕಾರಣವಾಯಿತು.

ಈ. ಕೆಳಗಿನ ಪ್ರಶ್ನೆಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿರಿ.

1. ರಾಜನ ಒಡ್ಡೋಲಗದಲ್ಲಿ ನಡೆದ ಪ್ರಸಂಗವನ್ನು ವಿವರಿಸಿರಿ.

ಉ : ಒಂದು ದಿನ ರಾಜ ಒಡ್ಡೋಲಗದಲ್ಲಿ ಇದ್ದಾಗ ಅವನ ಮಂತ್ರಿ ಗಟ್ಟಿಯಾಗಿ ಅಳುತ್ತಾ ಬಂಧನು ಅವನ ರೋಧನಕ್ಕೆ ಕಾರಣವೇನು ಎಂದು ರಾಜನು ಕೇಳಿದನು, ಆಗ ಮಂತ್ರಿ ತನ್ನ ನಾಲಿಗೆಯನ್ನು ಉದ್ದಮಾಡಿ ಗಂಧರ್ವಸೇನರು ತೀರಿಕೊಂಡರಂತೆ ಎಂದು ಹೇಳುತ್ತಾ ಮಂತ್ರಿ ಮೂರ್ಛೆ ಹೋದನು ರಾಜ ಒಡ್ಡೋಲಗವನ್ನು ಅಲ್ಲಿಗೆ ನಿಲ್ಲಿಸಿ ಕಣ್ಣಿರು ಸುರಿಸುತ್ತಾ ಗಂಧರ್ವಸೇನರ ಆತ್ಮ ಶಾಂತಿಗಾಗಿ ನಾಲ್ಕು ದಿನಗಳ ಕಾಲ ರಾಜ್ಯಾದ್ಯಂತ ಎಲ್ಲರೂ ಶೋಕಾಚರಣೆ ಮಾಡಬೇಕೆಂದು ಆಜ್ಞಾಪಿಸಿದರು,

2. ಗಂಧರ್ವಸೇನ ಯಾರು ಎಂಬುದನ್ನು ತಿಳಿಯಲು ಮಂತ್ರಿಯು ಮಾಡಿದ ಪ್ರಯತ್ನಗಳೇನು ?

ಉ : ಮಂತ್ರಿ ಮೊದಲು ಪಡೆಯ ಮುಖ್ಯಸ್ಥನನ್ನು ಭೇಟಿಯಾಗಿ ಗಂಧರ್ವಸೇನ ಯಾರು ಎಂದು ಕೇಳಿದನು ಆಗ ಪಡೆಯ ಮುಖ್ಯಸ್ಥ ನನಗೆ ಗೊತ್ತಿಲ್ಲ ನನ್ನ ಹೆಂಡತಿಗೆ ಗೊತ್ತು ಎಂದನು ನಂತರ ಇಬ್ಬರು ಕೂಡಿಕೊಂಡು ಆತನ ಹೆಂಡತಿಯನ್ನು ಕೇಳುತ್ತಾರೆ ಆಕೆ ನನಗೆ ಅವರೂ ಯಾರು ಗೊತ್ತಿಲ್ಲ ಮಡಿವಾಳ್ತಿ ಗಂಧರ್ವಸೇನ ಸತ್ತಿದ್ದಾನೆ ಎಂದು ಅಳುತ್ತಿದ್ದಳು ಎಂದಳು ಎಲ್ಲರು ಕೂಡಿಕೊಂಡು ಮಡಿವಾಳ್ತಿಯ ಮನೆಗೆ ಹೋಗುತ್ತಾರೆ ಆಗ ಮಡಿವಾಳ್ತಿ ಗಂಧರ್ವಸೇನ ತನ್ನ ಪ್ರೀತಿಯ ಕತ್ತೆ ಎಂದು ಹೇಳಿದಳು.

ಉ. ಸಂದರ್ಭ ಸಹಿತ ವಿವರಿಸಿರಿ.

2. "ಸ್ವಾಮಿ ಅವರು ಯಾರು? ಏನಾಗಿದ್ದರು? ಎಂದು ನನಗೆ ತಿಳಿಯದು"

ಉ :– ಆಕರ :– ಈ ಮೇಲಿನ ವಾಕ್ಯವನ್ನು ಗಂಧರ್ವಸೇನ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ :– ಚುರುಕು ಬುದ್ಧಿಯ ಸೇವಕಿಯ ಮಾತನ್ನು ಕೇಳಿ ರಾಜ ಮಂತ್ರಿಯನ್ನು ವಿಚಾರಿಸಿದಾಗ ಮಂತ್ರಿ ತನಗೆ ಗೊತ್ತಿಲ್ಲ ಎಂದು ಸೇನಾಪಡೆಯ ಮುಖ್ಯಸ್ಥನನ್ನು ಕೇಳಿದಾಗ ಸೇನಾ ಪಡೆಯ ಮುಖ್ಯಸ್ಥ ಈ ಮೇಲಿನ ಮಾತನ್ನು ಹೇಳಿದನು.

ಸ್ವಾರಸ್ಯ :– ಸೇನಾ ಪಡೆಯ ಮುಖ್ಯಸ್ಥ ಸುದ್ದಿಯ ನಿಜಾಂಶ ತಿಳಿದಿರಲಿಲ್ಲ.

---

3. "ನಿನ್ನೆ ರಾತ್ರಿ ಕಣ್ಣು ಮುಚ್ಕೊಂಡಬಿಟ್ಟ"

ಉ :– ಆಕರ :– ಈ ಮೇಲಿನ ವಾಕ್ಯವನ್ನು ಗಂಧರ್ವಸೇನ ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ :– ಮಂತ್ರಿ ಗಂಧರ್ವಸೇನ ಯಾರು ಎಂದೂ ಹುಡುಕುತ್ತಾ ಕೊನೆಗೆ ಮಡಿವಾಳ್ತಿಯ ಮನೆಗೆ ತಲುಪಿ ಗಂಧರ್ವಸೇನ ಯಾರೆಂದು ಕೇಳಲು ಗಂಧರ್ವಸೇನ ನನ್ನ ಪ್ರೀತಿಯ ಕತ್ತೆ ಎಂದು ಮಡಿವಾಳ್ತಿ ರೋಧಿಸುತ್ತಾ ನುಡಿಯುವಾಗ ಈ ಮೇಲಿನ ಮಾತನ್ನು ಹೇಳಿದಳು.

ಸ್ವಾರಸ್ಯ :– ಪ್ರತ್ಯಕ್ಷ ಕಂಡರು ಪ್ರಮಾಣಿಸಿ ನೋಡು.

---

ಉಕ್ತಲೇಖನ

1. ಒಡ್ಡೋಲಗ
2. ಮಂತ್ರಿ
3. ಗಂಧರ್ವಸೇನ
4. ಸೇವಕಿ
5. ಮಡಿವಾಳ್ತಿ
6. ಕತ್ತೆ
7. ಸ್ವಾಮಿ
8. ಮಹಾರಾಣಿ
9. ಹೆಂಡತಿ
10. ಕ್ಷಮಿಸಿ.